ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 05–10–2019

## ಮಾಧ್ಯಮದವರ ಗಮನಕ್ಕೆ

ದಿನಾಂಕ 10–10–2019 ರಂದು ಬೆಂಗಳೂರಿನ ಇಸ್ರೋದ ಸಭಾ ಭವನದಲ್ಲಿ ಪ್ರಧಾನ ಮಂತ್ರಿಗಳ ಇನ್ನೋವೇಟಿವ್ ಲರ್ನಿಂಗ್ ಪೋಗ್ರಾಂನ ಉದ್ಘಾಟನೆ ಸಮಾರಂಭವನ್ನು ಬೆಳಿಗ್ಗೆ 9–30 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ಸಚಿವರು ಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮಕ್ಕೆ ಭಾಗವಹಿಸಲು ಪಾಸ್‌ಗಳು ಕಡ್ಡಾಯವಾಗಿದ್ದು, 30 ಜನ ಪತ್ರಕರ್ತರಿಗೆ ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ. ರಾಜ್ಯಮಟ್ಟದ ಪತ್ರಿಕೆಗಳ, ವಿದ್ಯುನ್ಮಾನ ಮಾಧ್ಯಮದ ಪತ್ರಕರ್ತರು ತಮ್ಮ ಹೆಸರುಗಳನ್ನು ದಿನಾಂಕ: 06–10–2019 ಒಳಗಾಗಿ pressandnewsbangalore@gmail.com ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿ. ಮೊದಲು ನೊಂದಾಯಿಸಿಕೊಂಡವರಿಗೆ ಆದ್ಯತೆ. ನಂತರ ಬಂದ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

ಉಪ ನಿರ್ದೇಶಕರು (ವಾರ್ತೆ)

## ಪತ್ರಿಕಾ ಪ್ರಕಟಣೆ

## ವಿಜಯದಶಮಿಯಂದು ಸಹ ತೆರೆದಿರುವ

## ಬನ್ನೇರುಘಟ್ಟ ಜೈವಿಕ ಉದ್ಯಾನವನ

ಬೆಂಗಳೂರು, ಅಕ್ಟೋಬರ್ 05 (ಕರ್ನಾಟಕ ವಾರ್ತೆ)

ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ಪ್ರತಿ ಮಂಗಳವಾರ ರಜೆ ಇರುತ್ತಿತ್ತು. ಸೆಪ್ಟೆಂಬರ್ 8 ರಂದು ವಿಜಯದಶಮಿ ಹಬ್ಬದ ಪ್ರಯುಕ್ತ ಸರ್ಕಾರಿ ರಜೆ ಹಿನ್ನೆಲೆಯಲ್ಲಿ ಅಂದು ಹೆಚ್ಚು ಪ್ರವಾಸಿಗರು ಉದ್ಯಾನವನ ವೀಕ್ಷಣೆಗೆ ಬರುವುದರಿಂದ, ಅವರ ವೀಕ್ಷಣೆಗೆ ಅನುಕೂಲವಾಗುವಂತೆ ಉದ್ಯಾನವನದ ಮೃಗಾಲಯ, ಸಫಾರಿ ಮತ್ತು ಚಿಟ್ಟೆ ಉದ್ಯಾನವನ ಇತ್ಯಾದಿಗಳನ್ನು ತೆರೆದಿಡಲಾಗುತ್ತದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## Bannerghatta Biological Park will remain opened on Tuesday

**Bengaluru, October 5 (Karnataka Information)**

**It is notified to the general public that through normally on every Tuesday the Park remains closed, but on the eve of "Vijaya Dashami Festival" on 08-10-2019 , the Bannerghatta Biological Park will remain opened for the public.**

## PRESIDENT RAMNATH KOVIND TO PAY THREE-DAY OFFICIAL VISIT TO THE STATE FROM OCTOBER 10

**BENGALURU, OCTOBER 5 ( KARNATAKA INFORMATION ) :**

**The President of India Mr Ramnath Kovind will be paying a three-day official visit to the State from October 10.**

**According to the tour itinerary released here on Saturday, immediately on his arrival at Mysuru on October 10, Mr Kovind will visit the Palace and inaugurate the Centenary Celebrations of His Highness the Maharaja of Mysuru Late Jayachamaraja Wadiyar.**

**The next day on October 11, the President will visit Sree Srikanteshwara Temple at Nanjanagud and Sree Chamundeshwari Temple atop the Chamundi Hills in the morning. Mr Kovind will participate at the Ground Breaking Ceremony and Lay the Foundation Stone for the JSS Academy of Higher Education and Research at its sprawling campus at Varuna Village.**

**On October 12, on Saturday, Mr Kovind will have breakfast with the Chief Justice and Judges of the High Court of Karnataka at Raj Bhavan and visit the residence of former Union Minister Late H N Ananth Kumar. The President will visit Swami Vivekananda Yoga Anusandhana Sansthana (S-**

**VYASA) University at Jigani in Anekal Taluk in Bengaluru Urban District, before emplaning for Ahmadabad, the same day.**

## ರಾಜ್ಯದ ಮಟ್ಟದ ಕಲಾಶ್ರೀ ಪ್ರಶಸ್ತಿಗಾಗಿ ಆಯ್ಕೆ ಶಿಬಿರ

ಬೆಂಗಳೂರು, ಅಕ್ಟೋಬರ್ 5, (ಕರ್ನಾಟಕ ವಾರ್ತೆ)

ಬಾಲ ಭವನ ಸೊಸೈಟಿ ಬೆಂಗಳೂರು ಮಕ್ಕಳ ದಿನಾಚರಣೆ ಅಂಗವಾಗಿ ರಾಜ್ಯ ಮಟ್ಟದ ಕಲಾಶ್ರೀ ಪ್ರಶಸ್ತಿಗಾಗಿ ಆಯ್ಕೆ ಶಿಬಿರವನ್ನು ಸೃಜನಾತ್ಮಕ ಕಲೆ, ಬರವಣಿಗೆ, ಪ್ರದರ್ಶನ ಕಲೆ, ವಿಜ್ಞಾನದಲ್ಲಿ ನೂತನ ಅವಿಷ್ಕಾರ, ಈ ಪ್ರಕಾರಗಳಲ್ಲಿ ನವೆಂಬರ್ ಮಾಹೆಯಲ್ಲಿ ನಡೆಸಲು ಉದ್ದೇಶಿಸಿದೆ. ಬೆಂಗಳೂರು ನಗರ ಜಿಲ್ಲೆಯ 09–16 ವರ್ಷದೊಳಗಿನ ಮಕ್ಕಳಿಗಾಗಿ ಸ್ಥಳೀಯ ಮಟ್ಟದ ಆಯ್ಕೆ ಶಿಬಿರವನ್ನು ದಿನಾಂಕ: 20–10–2019 ರಂದು ಏರ್ಪಡಿಸಿದ್ದು, ವಿವರ ಇಂತಿದೆ.

ಸೃಜನಾತ್ಮಕ ಪ್ರದರ್ಶನ ಕಲೆ ಕುರಿತು ಅಕ್ಟೋಬರ್ 20 ರಂದು ಬೆಳಿಗ್ಗೆ 10.30 ಗಂಟೆಗೆ ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯ, ಕರ್ನಾಟಕ ಅಥವಾ ಹಿಂದೂಸ್ತಾನಿ, ಶಾಸ್ತ್ರೀಯ ಸಂಗೀತ, ವಾದ್ಯ ಸಂಗೀತ, ಸುಗಮ ಸಂಗೀತ, ಯಕ್ಷಗಾನ, ಯಕ್ಷಿಣಿ ಪ್ರದರ್ಶನ, ಏಕಪಾತ್ರಾಭಿನಯ, ಯೋಗದೊಂದಿಗೆ ನೃತ್ಯ, ಇತ್ಯಾದಿ ಯಾವುದಾದರೊಂದು ಕಲೆಯನ್ನು ಮಾತ್ರ ಪ್ರದರ್ಶಿಸಲು ಅವಕಾಶವಿರುತ್ತದೆ.

ಸೃಜನಾತ್ಮಕ ಕಲೆ ಕುರಿತು ಅಕ್ಟೋಬರ್ 20 ರಂದು ಬೆಳಿಗ್ಗೆ 11.30 ಗಂಟೆಗೆ ಚಿತ್ರಕಲೆ, ಕರಕುಶಲಕಲೆ ಜೇಡಿಮಣ್ಣಿನ ಕಲೆ, (ಮೂರರಲ್ಲೂ ಕಡ್ಡಾಯವಾಗಿ ಭಾಗವಹಿಸಬೇಕು) (ಹಾಳೆ ಮತ್ತು ಜೇಡಿಮಣ್ಣು ನೀಡಲಾಗುವುದು. ಕರಕುಶಲ ಸಾಮಗ್ರಿಗಳನ್ನು ತಂದು ಸ್ಥಳದಲ್ಲೇ ತಯಾರಿಸುವುದು)

ಸೃಜನಾತ್ಮಕ ಬರವಣಿಗೆ ಕುರಿತು ಅಕ್ಟೋಬರ್ 20 ರಂದು ಅಪರಾಹ್ನ 12.00 ಗಂಟೆಗೆ ಕಥೆ, ಕವನ, ಪ್ರಬಂಧ, ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಬರೆಯುವುದು (ಮೂರರಲ್ಲೂ ಕಡ್ಡಾಯವಾಗಿ ಭಾಗವಹಿಸಬೇಕು)

ವಿಜ್ಞಾನದಲ್ಲಿ ನೂತನ ಆವಿಷ್ಕಾರ ಕುರಿತು ಅಕ್ಟೋಬರ್ 20 ರಂದು ಮಧ್ಯಾಹ್ನ 12.30 ಗಂಟೆಗೆ ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಒಂದು ವಿಷಯದ ಬಗ್ಗೆ ಮಾದರಿ ಪ್ರದರ್ಶನ ಹಾಗೂ ವಿವರಣೆ ಮತ್ತು ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತೀರ್ಪುಗಾರರ ಇನ್ನಿತರ ಪ್ರಶ್ನೆಗಳಿಗೆ ಉತ್ತರ.

ಮೇಲ್ಕಂಡ ಪ್ರಕಾರಗಳಲ್ಲಿ ಪ್ರಾವೀಣ್ಯತೆ ಹೊಂದಿರುವ 09 – 16 ವರ್ಷದ ಮಕ್ಕಳು ಸ್ಥಳೀಯ ಮಟ್ಟದ ಆಯ್ಕೆಯಲ್ಲಿ ಪಾಲ್ಗೊಂಡು ಆಯ್ಕೆಯಾದಲ್ಲಿ ನವೆಂಬರ್ ಮಾಹೆಯಲ್ಲಿ ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಶಿಬಿರದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು.

**ಹೆಚ್ಚಿನ ವಿವರಗಳಿಗೆ ಹಾಗೂ ನೋಂದಣಿಗಾಗಿ ಕಾರ್ಯದರ್ಶಿಗಳ ಕಚೇರಿ, ಬಾಲ ಭವನ ಸೊಸೈಟಿ, ಬೆಂಗಳೂರು – 1, ಇಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080 – 22864189 ಮೂಲಕ ಸಂಪರ್ಕಿಸಬಹುದಾಗಿದೆ.**